ಎಂ.ಎಸ್. ಸ್ವಾತಿ, ಗೌರಿಬಿದನೂರು

ಸೊಳ್ಳೆಗಳ ಬ್ಲಡ್ ಗ್ರೂಪ್ ಯಾವುದು ರಾಮ್?




ಅಷ್ಟೊಂದು ಸೊಳ್ಳೆಬ್ಯಾಟ್‌ಗಳ ಮಧ್ಯೆಯೂ ಆತ್ಮವಿಶ್ವಾಸದಿಂದ ಹಾರಾಡುವುದರಿಂದ 'ಬಿ ಪಾಸಿಟಿವ್'!

ಟಿ.ಕೆ. ಮೂರ್ತಿ, ಉಜಿರೆ

ನೀವು ಪರೀಕ್ಷೆಯಲ್ಲಿ ಕೇಳಿದ ಪ್ರಶ್ನೆಗಳಿಗೂ ಹೀಗೇ ಉತ್ತರಿಸುತ್ತಿದ್ದಿರಾ?

ಉತ್ತರಿಸುತ್ತಿದ್ದೆ ಇಂತಹ ಪ್ರಶ್ನೆಗಳನ್ನೇ ಕೇಳಿದ್ದಿದ್ದರೆ!

ಟಿ. ಜಾಗೃತ, ತುಮಕೂರು

ಹತ್ತು ವರ್ಷದ ನಾನು ಐದು ವರ್ಷದ ನನ್ನ ತಮ್ಮನಿಗೆ ಪ್ರೀತಿಯ ಜೊತೆಗೆ ಏನನ್ನು ಕೊಡಲಿ?

ನಿನ್ನ ಜೊತೆ ಪಾರ್ಕಿನಲ್ಲಿ ಆಟ ಆಡಲು ಸಮಯ ಕೊಡು.

ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು

ವಿದ್ಯಾವಂತರೇ ಹೆಚ್ಚಾಗಿ ಸೈಬರ್ ಕ್ರೈಂಗೆ ಒಳಗಾಗುತ್ತಿರುವುದೇಕೆ?



ನೆಟ್‌ನಲ್ಲಿರುವುದೆಲ್ಲ ನೆಟ್ಟಗಿರುತ್ತದೆ ಎಂಬ ಮೂಢನಂಬಿಕೆಯಿಂದ.

ಪಿ.ಆರ್. ಶ್ರೀನಿವಾಸ, ಬೆಂಗಳೂರು

'ನಂಬಿ ಕೆಟ್ಟವರಿಲ್ಲವೋ ಹರಿಯೇ' ಎಂದ ದಾಸರೇ 'ಆರು ಬದುಕಿದರಯ್ಯ ಹರಿ ನಿನ್ನ ನಂಬಿ' ಎಂದರಲ್ಲಾ...?

ಒಂದನ್ನು ದ್ವಾದಶಿಯ ಬೆಳಗ್ಗೆ, ಇನ್ನೊಂದನ್ನು ಏಕಾದಶಿಯ ಮಧ್ಯಾಹ್ನ ಬರೆದಿರಬಹುದೇನೋ...!

ಶ್ರೀಧರ್, ಬೆಂಗಳೂರು

ಸಾಯುವುದಕ್ಕೆ ಧೈರ್ಯವಿಲ್ಲ, ಬದುಕಿ ಪ್ರಯೋಜನವಿಲ್ಲ. ಭಂಡ ಬಾಳಾಗಿದೆ. ಏನು ಮಾಡಲಿ?

ಕೋವಿಡ್ ವ್ಯಾಕ್ಸಿನ್ ಪ್ರಯೋಗಕ್ಕೆ ವಾಲಂಟಿಯರ್ ಆಗಿ.

ವಿ.ಎಸ್. ರಾಮಮೂರ್ತಿ, ಕಂದವಾರ

ಮತದಾರನಿಗೆ ಮತದಾನ ಮಾಡುವ ವೇಳೆಯಲ್ಲಿ ಮಂಕು ಕವಿಯುತ್ತದೆಯಾ?

ಹೂಂ. ಮತಚೀಟಿಯಲ್ಲಿರುವ ಪರಮಸ್ವಾರ್ಥಿಗಳ ಮುಖಗಳನ್ನು ನೋಡಿದ ತಕ್ಷಣ ಮಂಕು ಕವಿಯುತ್ತದೆ.

ಆರ್. ಮಧುಸೂದನ್, ಹಾಸನ

'ಮೆದುಳು' ಮಾಡಿದ ತಪ್ಪಿಗೆ 'ಕಪಾಳಕ್ಕೆ' ಏಕೆ ಮೋಕ್ಷ ಮಾಡುತ್ತಾರೆ?

ಫ್ಲವರ್ ರಾಕೆಟ್ ನಿಯಮ. ಕೆಳಗೆ ಕಿಡಿ ತಾಗಿಸಿದರೆ ಮೇಲೆ ಬೆಳಕು ಮೂಡುತ್ತದೆ.

ಎ. ಮೃತ್ಯುಂಜಯ, ಪಾಂಡವಪುರ

ಹೆಣ್ಣಿನ ಸೌಂದರ್ಯಕ್ಕೆ ಮಾರು ಹೋಗದವರಾರು?

ಪ್ಲಾಸ್ಟಿಕ್ ಸರ್ಜನ್‌ಗಳು.

ಪಿ.ಜೆ. ರಾಘವೇಂದ್ರ, ಮೈಸೂರು

ಈಗಿನ ಚುನಾವಣೆಗೂ, ಆಗಿನ ಯುದ್ಧಕ್ಕೂ ಏನು ವ್ಯತ್ಯಾಸ?

ಆಗಿನ ಯುದ್ಧದಲ್ಲಿ ಕತ್ತೆಗಳು ಇರಲಿಲ್ಲ.

ತಲಕಾಡು ಶ್ರೀನಿಧಿ, ಬೆಂಗಳೂರು

ಸಹೋದ್ಯೋಗಿ, ಸಹಪಾಠಿಯಂತೆಯೇ ಸದಾ ಜಾಲತಾಣದಲ್ಲಿ ಇರುವರನ್ನು ಏನೆಂದು ಹೆಸರಿಸಬಹುದು?

ಸಹಸೋಮಿ (ಸೋಮಿ = ಸೋಷಿಯಲ್ ಮೀಡಿಯಾದವ), ಸಹಬ್ಲಾಗಿ.

ಹೆಚ್.ಕೆ. ಸುಬ್ಬಲಕ್ಷ್ಮಿ, ಕೋಲಾರ

ಕೊರೋನಾಗೆ ಕೆಂಪು ಬಣ್ಣ ಇಷ್ಟವೆ?

ಊಹೂಂ. ಬಿಳಿ. ಲಕ್ಷಾಂತರ ದೇಹಗಳಿಗೆ ಅದನ್ನೇ ಹೊದೆಸಿದೆಯಲ್ಲ.

ವಿ. ಹಮೀದ್, ವಿಟ್ಲ

ಮದುವೆ ಆಗೋಣ ಎಂದರೆ ಥೂ ಎನ್ನುತ್ತಿದ್ದಾಳಲ್ಲಾ, ಏನ್ಮಾಡಲಿ?

ಅದು ವರಪರೀಕ್ಷೆ. ಉಗಿದರೂ ಒಲಿವವನು ಪತಿಯರಲ್ಲುತ್ತಮನು!

## ಬಹುಮಾನಿತ ಪ್ರಶ್ನೆ

ಅನಸೂಯ ಟಿ. ಕೇದಿಗೆಮನೆ

ಅಶ್ವತ್ಥಾಮ ಹನುಮಾದಿ ಸಪ್ತ ಚಿರಂಜೀವಿಗಳು ಈಗ ಎಲ್ಲಿದ್ದಾರೆ? ಅವರನ್ನು ಭೇಟಿಯಾಗಬಹುದೆ?

ಕಲಬೆರಕೆ ತಡೆಯಲಾರದೆ ಕೆಮ್ಮಿದ್ದರಿಂದ ಕ್ವಾರಂಟೈನಲ್ಲಿದ್ದಾರೆ. ಸತ್ವವಂತರಿಗೆ ಮಾತ್ರ ಕಾಣುವರಂತೆ.

ಎಂ.ಎಸ್. ಉಷಾ ಪ್ರಕಾಶ್, ಮೈಸೂರು

ಕೊರೋನಾ ಕಾಯಿಲೆ ತಡೆಗಟ್ಟಲು ನ್ಯಾಯಬೆಲೆ ಅಂಗಡಿಯಲ್ಲಿ ಮಾಸ್ಕ್ ವಿತರಿಸಬಾರದೆ?

ಪ್ರಯೋಜನವಾಗದು. ಕೊಳ್ಳಲು ನೂಕುನುಗ್ಗಲಾಗಿ ಮಾಸ್ಕ್ ಕೈ ಸೇರುವ ಮೊದಲೇ ಕೊರೋನಾ ಮೂಗೇರುತ್ತದೆ.

ಅಂಚೆ ಸುಬ್ರಹ್ಮಣ್ಯ, ಬೆಂಗಳೂರು

ಕರೋನ ಈ ರೀತಿ ಸದ್ದು ಮಾಡುತ್ತಿದ್ದರೂ ಒಬ್ಬ ಜ್ಯೋತಿಷಿಯೂ ತುಟಿ ಪಿಟಿಕ್ಕೆಂದಿಲ್ಲವಲ್ಲ ರಾಮ್?

ಮಿಕ್ಕವರಿಗೆ ಮುಖವಾಡ ತೊಡಿಸಿದ ಕರೋನ ಅವರ ಮುಖವಾಡ ಕಳಚಿದ್ದರಿಂದ ಸದ್ದಡಗಿದೆಯಂತೆ.

ಗುರುರಾಜ್‌ಅಶೋಕ್ ನಾವಿ, ಬಾಗಲಕೋಟೆ

ಟ್ರಂಪ್‌ಗೂ, ಪಂಪ್‌ಗೂ ವ್ಯತ್ಯಾಸವೇನು?



ಪಂಪ್ ಕೆಲಸ ಮಾಡುವಾಗ ಮಾತ್ರ ಸದ್ದು ಮಾಡುತ್ತದೆ.

ಪುಂಡಲೀಕ ಸಾದುರೆ, ಬೆಂಗಳೂರು

ಮನುಷ್ಯರನ್ನು ಮನುಷ್ಯರನ್ನಾಗಿ ಕಾಣುವ ಸಮಾಜ ನಿರ್ಮಿಸಲು ನಾನೇನು ಮಾಡಬೇಕು?

ಮೊದಲಿಗೆ ಪಶುತ್ವ ಇಲ್ಲದ ಮನುಷ್ಯರು ಇದ್ದಾರೆಯೇ ಎಂದು ಹುಡುಕಬೇಕು.

ಮಲ್ಲೇಶ್ ಪಾಟೀಲ್, ಊರಿಲ್ಲ

ಶಾಲೆಗೆ ಕಳುಹಿಸಲು ಕೊರೋನಾ ಭಯ; ಕಳಿಸದಿದ್ದರೆ ಭವಿಷ್ಯದ ಚಿಂತೆ. ಏನು ಮಾಡಲಿ?

ಫೀಸ್ ಕಟ್ಟಬಿಡಿ; ಪಾಸ್ ಮಾಡಿಸುತ್ತಾರೆ; ಮನೆಯಲ್ಲೇ ವಿದ್ಯೆ ನೀಡಿ.

■ ರಾಮ್

ಪ್ರಶ್ನೆ ಕಳುಹಿಸಲು: editorsu@sudha.co.in